# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 758/2018

| | | |
|---|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ ಎಂ.ಎಂ. | ಸಿ.ಡಬ್ಲ್ಯೂ ಃ 02 |
| ತಂದೆ ಹೆಸರು | ಃ ಮುಂಕುದನಾಯ್ಕಾ | ಪಿ.ಡಬ್ಲ್ಯೂ ಃ 02 |
| ವಯಸ್ಸು | ಃ 36 ವರ್ಷ | ಪ್ರಮಾಣೀಕರಿಸಿದ ದಿಃ 26/06/2024 |
| ವೃತ್ತಿ | ಃ ಸಿ.ಪಿ.ಸಿ. 617 | |
| ವಾಸ | ಃ ಹೊಳೆನರಸೀಪುರ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು 2017 ರಿಂದ 2022 ರವರೆಗೆ ಹಳ್ಳಿಮೈಸೂರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 19.06.2018 ರಂದು ಠಾಣಾ ಅಧಿಕಾರಿಗಳು ಕಿಟ್ ಆರ್ಟಿಕಲ್ ತೆಗೆದುಕೊಂಡು ಬರಲು ಹಾಸನಕ್ಕೆ ನೇಮಕ ಮಾಡಿದ್ದರು. ಅದರಂತೆ ನಾವು ಹಾಸನದ ಜಿಲ್ಲಾ ವರಿಷ್ಟ ಅಧಿಕಾರಿಗಳ ಕಚೇರಿಗೆ ಹೋಗಿ ಸದರಿ ಕಿಟ್ ಆರ್ಟಿಕಲ್ ಅನ್ನು ಕೆ.ಎಸ್.ಆರ್.ಟಿ.ಸಿ ಬಸ್ಸು ನಲ್ಲಿ ತೆಗೆದುಕೊಂಡು ಸಂಜೆ 07.30 ಕ್ಕೆ ಹೊಳೆನರಸೀಪುರ ಬಸ್ ನಿಲ್ದಾಣಕ್ಕೆ ಬಂದೇವು. ನಂತರ ಹಳ್ಳಿಮೈಸೂರಿಗೆ ಹೋಗಲೆಂದು ಚಾಸಾ-1 ರವರು ಆಟೋ ಕರೆದುಕೊಂಡು ಬರಲೆಂದು ಹೋಗಿ ಬರಲಿಲ್ಲ, ನಾನು ಹೋಗಿ ನೋಡಲಾಗಿ ಅಲ್ಲಿ ಚಾಸಾ-1 ರವರ ಸಮವಸ್ತವನ್ನು ಹಿಡಿದು ಒಬ್ಬ ವ್ಯಕ್ತಿಯು ಎಳೆದಾಡುತ್ತಿದ್ದ. ಸದರಿ ವ್ಯಕ್ತಿ ನಾನು ಮಂಜ, ಅಂಬೇಡ್ಕರ ನಗರ ಎಂದು ಚಾಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

ತಕ್ಷಣ ಚಾಸಾ-1 ರವರ ಬಲ ಕಪಾಳಕ್ಕೆ ಆರೋಪಿ ಹೊಡೆದಿರುತ್ತಾನೆ. ನಾನು ತಕ್ಷಣ ಹೋಗಿ ಇಬ್ಬರನ್ನು ಸಮಾಧಾನಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಐ.ಎಲ್.ಎಸ್. ವಕೀಲರಿಂದಃ

ದಿನಾಂಕಃ 19.06.2018 ರಂದು ನಾವು ಹಾಸನಕ್ಕೆ ಬಸ್ಸಿನ ಮೂಲಕ ಹೋಗಿರುತ್ತೇವೆ. ಬಸ್ಸಿನಲ್ಲಿ ಹೋದರೆ ನಮಗೆ ವಾರೆಂಟ್ ಕೊಡುತ್ತಾರೆ ಎಂದರೆ ಸರಿ. ಸದರಿ ವಾರೆಂಟ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಸನಕ್ಕೆ ಯಾವುದೇ ಕಿಟ್ ಅನ್ನು ತೆಗೆದುಕೊಂಡು ಬರಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಬಸ್ಸು ನಿಲ್ದಾಣದಲ್ಲಿ ಸುಮಾರು 5 ನಿಮಿಷ ಚಾಸಾ-1 ರವರನ್ನು ಕಾಯ್ದಿರಿತ್ತೇನೆ ಆದರೆ ಬರಲಿಲ್ಲ. ನಾನು ಸ್ಥಳಕ್ಕೆ ಹೋದಾಗಾ ಗಲಾಟೆಯು ನಡೆಯುತ್ತಿತ್ತು. ನಾನು ಕಿಟ್ ಅನ್ನು ನೋಡಿಕೊಳ್ಳಲು ಸಾರ್ವಜನಿಕರಿಗೆ ಹೇಳಿರುತ್ತೇನೆ. ಮೈಸೂರು ಬಸ್ ಪ್ಲಾಟ್ ಫಾರಂನಿಂದ ಹಳ್ಳಿಮೈಸೂರು ಪ್ಲಾಟ್ ಫಾರಂ ಗೆ 100 ಮೀಟರ್ ಇರಲಿಲ್ಲ ಎಂದರೆ ಸರಿ. ಆದ್ದರಿಂದ ಸದರಿ ಕಿಟ್ ಅನ್ನು ಅಲ್ಲಿಗೆ ನೀವೇ

ತೆಗೆದುಕೊಂಡು ಹೋಗಬಹುದಿತ್ತು ಎಂದರೆ ಸಾಕ್ಷಿ ಅದು ಭಾರ ಇತ್ತು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಸಂಬಂಧಿಸಿದ ಸಮವಸ್ತ್ರವನ್ನು ಹಾಜರುಪಡಿಸಿರುವುದಿಲ್ಲ. ಆ ದಿನ ಚಾಸಾ-1 ರವರು ಸಮವಸ್ತ್ರವನ್ನು ಧರಿಸಿಲ್ಲ ಹಾಗೂ ನಾವು ಯಾವುದೇ ಕಿಟ್ ಅನ್ನು ತೆಗೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರ ಕಪಾಳಕ್ಕೆ ಹೊಡೆದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ